


# ಗತವೈಭವದ ಪುನರ್ನಿರ್ಮಾಣ

## ಕೊಲ್ಕತದಲ್ಲಿರುವ ಸ್ವಾಮಿ ವಿವೇಕಾನಂದರ ಪೂರ್ವಿಕರ ಮನೆ

ಸ್ವಾಮಿ ಆತ್ಮಶ್ರದ್ಧಾನಂದ

ಸ್ವಾಮಿ ವಿವೇಕಾನಂದರ ದೇಹತ್ಯಾಗವಾಗಿ ಸುಮಾರು ನೂರುವರ್ಷಗಳ ನಂತರ ಅವರು ಜನ್ಮತಾಳಿದ ಮನೆ ಒಂದು ಭವ್ಯ ಸ್ಮಾರಕವಾಗಿ ಜಗತ್ತಿನ ಮುಂದೆ ಕಾಣಿಸಿಕೊಳ್ಳುತ್ತಿದೆ. ಆ ಮನೆಯ ಇತಿಹಾಸ ಮತ್ತು ಅದರ ಜೀರ್ಣೋದ್ಧಾರ ಕಾರ್ಯದ ರೋಚಕ ವಿವರಣೆ —ಇದನ್ನು ಕುರಿತಾದ ಈ ಲೇಖನವನ್ನು ಬರೆದ ಸ್ವಾಮಿ ಆತ್ಮಶ್ರದ್ಧಾನಂದರು ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವರು.

ಕಾಲ ಎಲ್ಲವನ್ನೂ ನೆಲಸಮ ಮಾಡುತ್ತದೆ. ಅದು ಯಾರನ್ನೂ ಯಾವುದನ್ನೂ ಬಿಡುವುದಿಲ್ಲ. ಅದಕ್ಕೆ ಹಿರಿತನ ಕಿರಿತನವೆಂಬ ಭೇದವಿಲ್ಲ. ಅನೇಕಾನೇಕ ಶ್ರೇಷ್ಠ ಸಂಸ್ಕೃತಿಗಳೂ ನಾಗರಿಕತೆಗಳೂ ಜಗದ್ಭಕ್ಷಕನಾದ ಕಾಲನ ಬಾಯಿಗೆ ತುತ್ತಾಗಿವೆ. ಶ್ರೇಷ್ಠ ವ್ಯಕ್ತಿಯೊಬ್ಬನು ನಮ್ಮ ಮುಂದೆ ಕಾಣಿಸಿಕೊಳ್ಳುತ್ತಾನೆ; ತನ್ನ ಅಸೀಮ ವ್ಯಕ್ತಿತ್ವದ ಮೂಲಕ, ತನ್ನ ಅಪೂರ್ವವೂ ಉದಾತ್ತವೂ ಆದ ಸಂದೇಶದ ಮೂಲಕ ನಮ್ಮನ್ನು ಬೆರಗುಗೊಳಿಸುತ್ತಾನೆ. ಅವನು ಯಾವಾಗಲೂ ನಮ್ಮೊಂದಿಗಿರಬೇಕೆಂದು ನಾವು ತೀವ್ರವಾಗಿ ಬಯಸುತ್ತೇವೆ. ಆದರೆ ಅವನಿಗೂ ಕಾಲ ಬರುತ್ತದೆ, ನಮ್ಮ ಕಪಿಮುಷ್ಟಿಯಿಂದ ಅವನನ್ನು ಸೆಳೆದುಕೊಂಡು ಹೋಗುತ್ತದೆ. ಅವನ ಉದಾತ್ತ ಜೀವನದ, ಅನನ್ಯ ಸಂದೇಶದ ದಿವ್ಯ ಸ್ಮೃತಿ ಮಾತ್ರ ನಮ್ಮ ಹೃದಯಾಂತರಾಳದಲ್ಲಿ ಉಳಿಯುತ್ತದೆ.

ಆದರೆ ಈ ಸ್ಮೃತಿಯೇನೂ ನಿಷ್ಕ್ರಿಯವಾದುದಲ್ಲ, ಅದರ ಹಿಂದೆ ಆ ವ್ಯಕ್ತಿಯ ಸ್ಫೂರ್ತಿ ಕೆಲಸ ಮಾಡುತ್ತಿರುತ್ತದೆ. ಆ ವ್ಯಕ್ತಿಯನ್ನು ಇನ್ನೊಂದು ರೂಪದಲ್ಲಿ ನಾವು ಮತ್ತೆ ಪಡೆಯಲು ಪ್ರಯತ್ನಿಸುತ್ತೇವೆ. ಆ ವ್ಯಕ್ತಿಗೆ ಸಂಬಂಧಿಸಿದುದೆಲ್ಲವನ್ನೂ ಸಂಗ್ರಹಿಸಲು ಪ್ರಾರಂಭಿಸುತ್ತೇವೆ. ಅವನ ಬರಹಗಳು ಉಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ಸಂಗ್ರಹಿಸಿ ಪ್ರಕಟಿಸುತ್ತೇವೆ, ಅವನಿಗೆ ಸಂಬಂಧಪಟ್ಟ ವಸ್ತುಗಳನ್ನು ಜೋಪಾನವಾಗಿ ಕಾದಿರಿಸುತ್ತೇವೆ. ಅವನ ಜನ್ಮಸ್ಥಾನ, ಅವನು ವಾಸಿಸಿದ ಬೇರೆ ಬೇರೆ ಸ್ಥಳಗಳು ನಮಗೆ ತೀರ್ಥಕ್ಷೇತ್ರಗಳಾಗುತ್ತವೆ. ಆ ವ್ಯಕ್ತಿಯ ಆದರ್ಶವನ್ನು ಸಕ್ರಿಯವಾಗಿ ಉಳಿಸಿಕೊಂಡು ಬರಲು ಅವನ ಹೆಸರಿನ ಸುತ್ತ ಒಂದು ಸಂಸ್ಥೆ ನಿರ್ಮಾಣವಾಗುತ್ತದೆ. ಹೀಗೆ ಕಾಲ ಅವನನ್ನು ಕಬಳಿಸಿದರೂ ಅಸಂಖ್ಯ ಹೃದಯಮಂದಿರಗಳಲ್ಲಿ, ಸಂಸ್ಥೆಗಳಲ್ಲಿ, ಸಾಹಿತ್ಯದಲ್ಲಿ, ಮಂದಿರ ಸೌಧಗಳಲ್ಲಿ ಅವನು ಕಾಲಾನಂತರವೂ ನೆಲೆಸುತ್ತಾನೆ. "ಮೃತನ ನಿಜವಾದ ಗೋರಿ ಬದುಕಿರುವವನ ಹೃದಯ" ಎಂಬ ಮಾತು ಅವನ ವಿಷಯದಲ್ಲಿ ಸಾರ್ಥಕತೆಯನ್ನು ಪಡೆಯುತ್ತದೆ.

ಈ ದೃಷ್ಟಿಯಿಂದ ನೋಡಿದಾಗ ಕೊಲ್ಕತದಲ್ಲಿ ಸ್ವಾಮಿ ವಿವೇಕಾನಂದರ ಪೂರ್ವಿಕರ ಮನೆಗೆ ನಾವು ನೀಡಿದ ಭೇಟಿ ಅಪೂರ್ವ ವಿಶಿಷ್ಟತೆಯನ್ನು ಪಡೆಯುತ್ತದೆ. ಅದೊಂದು ಸಾಮಾನ್ಯ ಅನುಭವವಾಗಿರಲಿಲ್ಲ, ಅಪೂರ್ವ ಭಾವಪರಿವರ್ತನೆಯ, ಆಧ್ಯಾತ್ಮಿಕ ಸ್ಫೂರ್ತಿಯ ಅನುಭವವಾಗಿತ್ತು ಮತ್ತು ಶೈಕ್ಷಣಿಕವೂ ಆಗಿತ್ತು.

ಶೀರ್ಷಿಕೆಯ ಚಿತ್ರ: ವಿವೇಕಾನಂದರ ಪೂರ್ವಿಕರ ಮನೆಯಲ್ಲಿ ಬಾಲಕ ನರೇಂದ್ರ ಭಿಕ್ಷುಕರಿಗೆ ತನ್ನ ವಸ್ತ್ರಗಳನ್ನೇ ತೆಗೆದು ಬಿಸಾಡುತ್ತಿದ್ದ ಕೊಠಡಿಯ ಕಿಟಕಿಗಳು. ಈಗ ಅವೇ ಆ ಗತವೈಭವದ ಬೆಳಕಿನ ಕಿಂಡಿಗಳಂತೆ ಕಾಣುತ್ತಿವೆ.

ಅಂದು ಬೆಳಗ್ಗೆ ಉತ್ತರ ಕೊಲ್ಕತದಲ್ಲಿರುವ ಸಿಮ್ಲ ಪ್ರದೇಶಕ್ಕೆ ಹೋದೆವು. ನಮ್ಮ ಮನಸ್ಸು ಆ ಪ್ರದೇಶಕ್ಕೆ ಸಂಬಂಧಿಸಿದಂತೆ ಸ್ವಾಮೀಜಿಯ ಬಾಲ್ಯ ಜೀವನದ ಅನೇಕ ಘಟನೆಗಳಿಂದ ತುಂಬಿ ಹೋಗಿತ್ತು. ನಮ್ಮ ಹೃದಯ ಅವರ ಮನೆಯನ್ನು ನೋಡಬೇಕೆಂಬ ಉತ್ಸುಕತೆಯಿಂದ ಮಿಡಿಯುತ್ತಿತ್ತು. ಕಿಕ್ಕಿರಿದ ಜನಸಂದಣಿಯ ರಸ್ತೆಯ ಮೂಲಕ ನಾವು ಕಾರಿನಲ್ಲಿ ಹಾದು ಹೋಗುತ್ತ ಗೌರಮೋಹನ ಮುಖರ್ಜಿ ರಸ್ತೆಯನ್ನು ತಲುಪಿದೆವು. ನಮ್ಮ ಕಾರು ಒಂದು ಕಾಂಪೌಂಡಿನ ದೊಡ್ಡ ಬಾಗಿಲಿನ ಹತ್ತಿರ ನಿಂತಿತು. ಅದೇ ಸ್ವಾಮೀಜಿಯ ಪೂರ್ವಿಕರ ಮನೆ. ಅದು ಹೊರನೋಟಕ್ಕೆ ಜರ್ಜರಿತವಾಗಿತ್ತು. ನಿರ್ಲಕ್ಷ್ಯತೆ ಮಹಾನ್ ವ್ಯಕ್ತಿಯ ಸ್ಮೃತಿಯನ್ನು ಅದರಿಂದ ಸಂಪೂರ್ಣ ಅಳಿಸಿಹಾಕುವ ಎಲ್ಲ ಪ್ರಯತ್ನ ಮಾಡಿ ದಂತಿತ್ತು. ಈಗ ರಾಮಕೃಷ್ಣ ಮಹಾಸಂಘವು ಅದನ್ನು ತನ್ನ ವಶಕ್ಕೆ ತೆಗೆದುಕೊಂಡು ಅದರ ಜೀರ್ಣೋದ್ಧಾರ ಕಾರ್ಯವನ್ನು ಪ್ರಾರಂಭಿಸಿದೆ.

ಆ ಕಾರ್ಯದ ಉಸ್ತುವಾರಿಯನ್ನು ನಡೆಸುವ ಸ್ವಾಮಿಗಳು ನಮ್ಮನ್ನು ಕಟ್ಟಡವನ್ನು ತೋರಿಸಲು ಮತ್ತು ಜೀರ್ಣೋದ್ಧಾರ ಕಾರ್ಯ ಹೇಗೆ ನಡೆಯುತ್ತಿದೆ ಎಂಬುದನ್ನು ತೋರಿಸಲು ಕರೆದುಕೊಂಡು ಹೋದರು. ಮೊದಲು ಅವರು ಆ ಮನೆಯ ಬಗ್ಗೆ ಹೇಳತೊಡಗಿದರು: "ಇದು ಸುಮಾರು ೨೫೦ ವರ್ಷಗಳಷ್ಟು ಹಳೆಯ ಕಟ್ಟಡ. ಸ್ವಾಮೀಜಿಯ ಮುತ್ತಾತ ರಾಮಮೋಹನ ದತ್ತ ಇದನ್ನು ಕಟ್ಟಿದರು. ಅವರು ಬ್ರಿಟಿಷ್ ವಕೀಲರ ಕಛೇರಿಯಲ್ಲಿ ಕೆಲಸ ಮಾಡು ತ್ತಿದ್ದರು. ಅವರು ತುಂಬ ಹಣ ಸಂಪಾದನೆ ಮಾಡುವುದರ ಜೊತೆಗೆ ಸಾಕಷ್ಟು ಭೂಮಿಯನ್ನೂ ಗಳಿಸಿದ್ದರು. ಅರ್ಧ ಎಕರೆ ಜಾಗದಲ್ಲಿ ಒಂದು ವಿಶಾಲ ಭವ್ಯಭವನವನ್ನು ನಿರ್ಮಿಸಿದರು. ಅಂದಿನ ದಿನಗಳಲ್ಲಿ ಸಾಮಾನ್ಯ ಶ್ರೀಮಂತ ವರ್ಗದವರಿಗೆ ತಕ್ಕುದಾಗಿತ್ತು ಆ ಮನೆ. ಆದರೆ ೧೮೮೪ರಲ್ಲಿ ಸ್ವಾಮೀಜಿಯ ತಂದೆ ವಿಶ್ವನಾಥ ದತ್ತರ ಹಠಾತ್ ನಿಧನದಿಂದಾಗಿ ಕ್ರಮೇಣ ಆ ಮನೆಯ ವೈಭವ ಕ್ಷೀಣಿಸುತ್ತ ಹೋಯಿತು. ನಿಮಗೆ ತಿಳಿದಿರುವಂತೆ ವಿಶ್ವನಾಥ ದತ್ತರು ವಕೀಲರಾಗಿ ತುಂಬ ಹಣವಂತರಾಗಿದ್ದರು ಮತ್ತು ಅಷ್ಟೇ ಧಾರಾಳವಾಗಿ ಖರ್ಚನ್ನೂ ಮಾಡು ತ್ತಿದ್ದರು. ಅವರ ಈ ಔದಾರ್ಯದ ಪ್ರಯೋಜನವನ್ನು ಪಡೆದು ಅವರ ಸಂಬಂಧಿ ಕರನೇಕರು ಅವರ ಮನೆಯಲ್ಲೇ ವಸತಿ ಹೂಡಿ ದ್ದರು. ಆದರೆ ಅವರಲ್ಲನೇಕರು ತುಂಬ ಸ್ವಾರ್ಥಿ ಗಳಾಗಿದ್ದರು. ವಿಶ್ವನಾಥರ ಮರಣಾನಂತರ ಅವರು ತಾವು ಅತಿಥಿಗಳಾಗಿ ತಂಗಿದ್ದ ಮನೆಯನ್ನೇ ತಮ್ಮದಾಗಿಸಿಕೊಳ್ಳಲು ಪ್ರಯತ್ನಿಸಿದರು. ಆಸ್ತಿಯ ಕಲಹ ತುಂಬ ಜಟಿಲವಾಯಿತು, ನ್ಯಾಯಾ ಲಯದಲ್ಲಿ ಮೊಕದ್ದಮೆ ದೀರ್ಘಕಾಲ ಮುಂದು ವರಿಯಿತು. ಅವರು ನಿಜವಾಗಿಯೂ ಸ್ವಾಮೀಜಿ ಯವರ ಕುಟುಂಬದವರನ್ನೇ ಆ ಮನೆಯಿಂದ ಹೊರಹಾಕ ಬಯಸಿದ್ದರು. ಆದರೆ ಬಹುಕಾಲದ ನ್ಯಾಯಾಂಗ ಹೋರಾಟದ ನಂತರ ಮನೆಯ ಒಂದು ಸಣ್ಣ ಭಾಗ ಮಾತ್ರ ದತ್ತ ಕುಟುಂಬದವರಿಗೆ ಉಳಿಯಿತು. ಮನೆಯನ್ನು ೧೦ ಭಾಗಗಳಾಗಿ ವಿಭಾಗಿಸಲಾಯಿತು. ಕೆಲವು ಕಾಲದನಂತರ ಈ ಭಾಗಗಳ ಮಧ್ಯೆ ಒಂದು ಗಲ್ಲಿಯೂ ಅಸ್ತಿತ್ವಕ್ಕೆ ಬಂತು. ಹೀಗೆ ಇಡೀ ಆಸ್ತಿ ಛಿದ್ರಛಿದ್ರವಾಯಿತು. ಸ್ವಾಮೀಜಿಯ ಸಹೋದರರಾದ ಮಹೇಂದ್ರ ನಾಥ ದತ್ತ ಮತ್ತು ಭೂಪೇಂದ್ರನಾಥ ದತ್ತರು ಅವಿವಾಹಿತರಾಗಿದ್ದು ದರಿಂದ ದತ್ತಕುಟುಂಬದ ವಂಶಸ್ಥರಾರೂ ಇರಲಿಲ್ಲ. ಸ್ವಾಮೀಜಿಯ ಸಹೋದರಿಯ ವಂಶಸ್ಥರೊಬ್ಬರು ಮನೆಯ ಮೂಲೆಯೊಂದರಲ್ಲಿ ವಾಸಿಸುತ್ತಿದ್ದರು. ಈಗ ಮನೆಯನ್ನು ನೋಡೋಣ."


ಪೂಜಾಗೃಹದ ಕಂಬಗಳು

ಹೀಗೆ ಮನೆಯ ಪ್ರವಾಸ ಪ್ರಾರಂಭವಾಯಿತು. ನಮಗೀಗ ತಿಳಿದುಬಂತು, ಮೂಲ ಪ್ರವೇಶದ್ವಾರದಿಂದ ನಾವು ಮನೆಯನ್ನು ಪ್ರವೇಶಿಸಲಿಲ್ಲವೆಂದು. ಮೂಲ ಪ್ರವೇಶದ್ವಾರ ಸಣ್ಣ ಮರದ ಬಾಗಿಲಿನಿಂದ ಕೂಡಿತ್ತು ಮತ್ತು ಅಲ್ಲಿ ಮನೆಯನ್ನು ರಸ್ತೆಗೆ ಕೂಡಿಸುವ ಒಂದು ಚಿಕ್ಕ ಮೆಟ್ಟಲೇಣಿ ಇತ್ತು. ಒಂದು ಅಮೃತಶಿಲೆಯ ಫಲಕದ ಮೇಲೆ "೩, ಗೌರಮೋಹನ ಮುಖರ್ಜಿ ಲೇನ್, ಸ್ವಾಮಿ ವಿವೇಕಾ ನಂದರ ಮನೆ" ಎಂದು ಆಂಗ್ಲ ಭಾಷೆಯಲ್ಲಿ ಬರೆದಿದ್ದರು. ದುರಸ್ತಿಯ ಕಾರಣದಿಂದಾಗಿ ಈಗ ಆ ಪ್ರವೇಶದ್ವಾರವನ್ನು ಮುಚ್ಚಲಾಗಿದೆ. ಒಳಗಡೆ ಅನೇಕ ಗಾರೆಕೆಲಸದವರು ಮತ್ತು ಕೂಲಿಗಳು ಕೆಲಸ ಮಾಡು ತ್ತಿರುವುದನ್ನು ನೋಡಬಹುದಿತ್ತು. ನಾವು ಒಂದು ವರಾಂಡದ ಮೂಲಕ ಮುಂದುವರಿದೆವು. ಅದು ಆಲಂಕಾರಿಕ ಚಿತ್ತಾರಗಳಿಂದಲೂ ಶಿಲ್ಪಕಲಾಕೃತಿಯ ಕಂಬಗಳಿಂದಲೂ ಕೂಡಿತ್ತು. ಅಲ್ಲಿ ಬಿಳಿಗೆಂಪು ಗಾರೆಯನ್ನು ತಯಾರಿಸುತ್ತಿದ್ದರು. ಅದು ನಮ್ಮ ಗಮನವನ್ನು ಸೆಳೆಯಿತು. ಸ್ವಾಮಿಗಳು ವಿವರಿಸಿದರು: "ನಾವು ಸಿಮೆಂಟನ್ನು ಹೆಚ್ಚು ಉಪಯೋಗಿಸುತ್ತಿಲ್ಲ. ಮೂಲ ಕಟ್ಟಡದಲ್ಲಿ ಸಿಮೆಂಟನ್ನು ಉಪ ಯೋಗಿಸಿರಲೇ ಇಲ್ಲ. ಬಿಳಿ ಸುಣ್ಣ, ಚಿಪ್ಪುಸುಣ್ಣ ಮತ್ತು ಇಟ್ಟಿಗೆ ಪುಡಿ ಇವುಗಳ ಮಿಶ್ರಣದಿಂದ ತಯಾರಿಸಿದ ಸುರ್ಕಿಯನ್ನು ಉಪ ಯೋಗಿಸುತ್ತಿದ್ದರು. ನಾವು ಮನೆಗೆ ಸಾಧ್ಯವಾದಷ್ಟು ಮೂಲರೂಪವನ್ನು ಕೊಡಲು ಪ್ರಯತ್ನಿಸು ತ್ತಿದ್ದೇವೆ." ಅನಂತರ ಅವರು ಸುರ್ಕಿಗಾರೆಯನ್ನು ಹೇಗೆ ತಯಾರಿಸುವುದೆಂಬುದನ್ನು ತೋರಿಸಿದರು. ಒಣಗಿರುವ ಸ್ಥಿತಿಯಲ್ಲಿಯೇ ಎಲ್ಲ ಘಟಕಗಳನ್ನು ಬೆರೆಸಬೇಕು ಮತ್ತು ಅನಂತರ ಅದನ್ನು ೧೨ ದಿನ ನೀರಿನಲ್ಲಿ ನೆನೆಸಿಡಬೇಕು.

ವರಾಂಡ ಮತ್ತು ಅಂಗಳವನ್ನು (*open courtyard*) ದಾಟಿಹೋದರೆ ತೆಳ್ಳನೆಯ ಇಟ್ಟಿಗೆ ಕಂಬಗಳ ಆಧಾರದಮೇಲೆ ನಿಂತಿರುವ ಒಂದು ಹಾಲ್ (**hall**) ಸಿಕ್ಕುತ್ತದೆ. "ಇದು ಪೂಜಾಗೃಹ" ಎಂದು ಸ್ವಾಮಿಗಳು ಹೇಳಿದರು. ಹಿಂದೆ ಸಾಂಪ್ರ ದಾಯಿಕ ಮನೆಗಳಲ್ಲಿ ಮೊದಲು ಸಿಕ್ಕುವುದೇ ಪೂಜಾಸ್ಥಳ. ಅನೇಕ ಸಂದರ್ಭಗಳಲ್ಲಿ ಜಗ ನ್ಮಾತೆಯ ಪೂಜೆ ಅತ್ಯಂತ ವಿಜೃಂಭಣೆಯಿಂದ ಅಲ್ಲಿ ನಡೆದಿತ್ತು. ಅಲ್ಲಿಯೇ ಅನೇಕ ಪ್ರಮುಖ

ಘಟನೆಗಳು ನಡೆದವೆಂದು ನಾವು ಕೇಳಿರುವೆವು.

ಆ ಪೂಜಾಗೃಹದ ಕಂಬಗಳು ಹೊಸದಾಗಿ ತಯಾರಿಸಿದವು. ಅವುಗಳಿಗಾಗಿ ಕೆಂಪು ಇಟ್ಟಿಗೆಗಳನ್ನು ಪಶ್ಚಿಮ ಬಂಗಾಳದ ಒಂದು ಜಿಲ್ಲೆಯಿಂದ ತರಿಸಿದ್ದರು. ಅಲ್ಲಿ ಮಾತ್ರ ಈಗ ಅವುಗಳು ತಯಾರಿಸಲ್ಪಡುತ್ತಿವೆಯಂತೆ. ಮೂಲ ಪೂಜಾಗೃಹವು ಹೆಚ್ಚುಕಡಿಮೆ ಬಿದ್ದು ಹೋಗಿತ್ತಂತೆ. ಈಗ ಅದನ್ನು ಹಿಂದಿನ ಸುಸ್ಥಿತಿಗೆ ತರಲಾಗುತ್ತಿದೆ. ನಾವು ಮೆಟ್ಟಿಲನ್ನು ಏರಿ ಮುಂದುವರೆದಂತೆ ಗೋಡೆಯಮೇಲೆ ಚಿಕ್ಕದಾಗಿ ಏನೋ ಬರವಣಿಗೆ ಕಾಣಿಸಿತು. ಸ್ವಾಮಿಗಳು ವಿವರಿಸಿದರು: "ಇವು ಸರ್ವೇ ಗುರುತುಗಳು. ಪುನರ್ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳುವುದಕ್ಕೆ ಮುಂಚೆ ಇಡೀ ಮನೆಯನ್ನು ನಾವು ಏಳು ಬಾರಿ ಸರ್ವೇ ಮಾಡಿದೆವು —ಅದು ಈಗ ಎಷ್ಟು ಗಟ್ಟಿಯಾಗಿದೆ, ಮೊದಲು ಇದ್ದದ್ದು ಎಷ್ಟು ಮತ್ತು ಅನಂತರ ಸೇರಿಸಿದ ಅಂಶಗಳು ಯಾವುವು ಎಂಬುದನ್ನು ಪರೀಕ್ಷಿಸಲು. ಅನೇಕ ಜನರು ಅಲ್ಲಿ ವಾಸಿಸುತ್ತಿದ್ದರಿಂದ ಅವರ ಅನುಕೂಲಕ್ಕಾಗಿ ಮುಂದೆ ಎಷ್ಟೊ ಕೊಠಡಿಗಳನ್ನೂ ಬಾಲ್ಕನಿಗಳನ್ನೂ, ಗೋಡೆ ಒಡೆಯುವಿಕೆಯನ್ನೂ ಮಾಡಲಾಯಿತು. ಅಂತಹ ಎಷ್ಟೊ ನಿರ್ಮಾಣಗಳನ್ನು ನಾವು ನಾಶಮಾಡಬೇಕಾಯಿತು. ಈ ಪುನರ್ನಿರ್ಮಾಣ ಯೋಜನೆಗೆ ವಾಸ್ತುಶಿಲ್ಪದ ನಕ್ಷೆ ತಯಾರಿಸಲು ಪ್ರಸಿದ್ಧ ವಾಸ್ತು ಸಮಾಲೋಚಕ ಸಂಸ್ಥೆಯಾದ ಮೆಸರ್ಸ್ ಡೆವಲಪ್‌ಮೆಂಟ್ ಕನ್‌ಸಲ್ಟೆಂಟ್ ಲಿಮಿಟೆಡ್(*Development Consultant Limited*)—ಇವರ ಸಹಾಯವನ್ನು ಪಡೆಯಲಾಗಿದೆ."



ವಿವೇಕಾನಂದರು ಹುಟ್ಟಿದ ಕೊಠಡಿ

ಮೂಲ ಮನೆಯಲ್ಲಿ ಈ ಕೆಳಗಿನ ಭಾಗಗಳಿದ್ದವು : ಒಂದು ದೊಡ್ಡ ಅಂಗಳ (ಒಳ ಮತ್ತು ಹೊರಾಂಗಣ ಸೇರಿ), ವಿಶಾಲ ಪೂಜಾಗೃಹ, ದೊಡ್ಡ ಕೊಳದಿಂದ ಕೂಡಿದ, ಮಹಿಳೆಯರಿಗೇ ಪ್ರತ್ಯೇಕವಾದ ಒಂದು ಭಾಗ (*apartment*), ಅನೇಕ ವಸತಿಕೋಣೆಗಳು, ದೊಡ್ಡ ಬೈಠಕ್‌ಖಾನೆ, ಕುದುರೆಗಳಿಗೆ ಪ್ರತ್ಯೇಕ ಲಾಯ ಹಾಗೂ ದನದ ಕೊಟ್ಟಿಗೆ ಇತ್ಯಾದಿ. ಆದರೆ ಮೂಲದಲ್ಲಿ ಇದ್ದದ್ದು ಯಾವುವು ಮತ್ತು ಅನಂತರ ಸೇರಿಸಿದವು ಯಾವುವು ಎಂಬುದನ್ನು ನಿರ್ಣಯಿಸುವುದು ಹೇಗೆ? ನಮಗೆ ಮನೆಯನ್ನು ತೋರಿಸುತ್ತಿದ್ದ ಸ್ವಾಮಿಗಳು ಹೇಳಿದರು: "ಸ್ವಾಮಿ ವಿವೇಕಾನಂದರ ಸಹೋದರರು ತಮ್ಮ ಬರಹಗಳಲ್ಲಿ ಕೆಲವು ಕಡೆ ಮನೆಯ ವಿವರಣೆಯನ್ನು ನೀಡಿರುವರು—ಉದಾಹರಣೆಗೆ ಮಹೇಂದ್ರನಾಥ ದತ್ತರ 'ವಿವೇಕಾನಂದ ಚರಿತ್'. ಇಷ್ಟೇ ಅಲ್ಲದೆ, ನಮಗೆ ಮೂಲ ಮನೆಯ ನೆಲ-ನಕ್ಷೆಯು (*Floor Plan*) ದೊರೆತಿದೆ. ಮನೆ ವಿಭಾಗದ ಸಮಯದಲ್ಲಿ ವಿವಾದಾಸ್ಪದ ಮನೆಯ ನೆಲ-ನಕ್ಷೆಯನ್ನು, ಸರ್ಕಾರೀ ನಿಯಮದ ಪ್ರಕಾರ ಉಚ್ಚ ನ್ಯಾಯಾಲಯಕ್ಕೆ ಒಪ್ಪಿಸಬೇಕಿತ್ತು. ಅದೃಷ್ಟವಶಾತ್ ಕೋರ್ಟಿನ ಕಡತಗಳಲ್ಲಿ ಇದನ್ನು ಹುಡುಕಿ ತೆಗೆಯಲು ನಮಗೆ ಸಾಧ್ಯವಾಯಿತು."

ಅರ್ಧಬಿದ್ದ, ಅರ್ಧ ಪುನರ್ನಿರ್ಮಾಣಗೊಂಡ ಸ್ಥಿತಿಯಲ್ಲಿದ್ದ ಇಡೀ ಮನೆ ತುಂಬ ಸಂಕೀರ್ಣವಾದ ಕಟ್ಟಡದಂತೆ ಕಂಡಿತು. ಸ್ವಾಮೀಜಿ ಜನಿಸಿದ ಸ್ಥಳವೆಂದು ಗುರುತಿಸಲಾದ ಕೊಠಡಿಯನ್ನು ನಮಗೆ ತೋರಿಸಿದರು. ಅದು ಮೊದಲನೆಯ ಮಹಡಿಯಲ್ಲಿತ್ತು. ಒಳಗಡೆ ಕೆಲವು ಗಾರೆ ಕೆಲಸದವರು ಕೆಲಸ ಮಾಡುತ್ತಿದ್ದರು. ಗೋಡೆಯ ಒಂದು ಭಾಗ ಬಿದ್ದುಹೋಗಿತ್ತು. ಕೆಲವು ಕಂಬಗಳು ಛಾವಣಿಯನ್ನು ಹೊತ್ತಿದ್ದವು. ಗೋಡೆಯನ್ನು ಎಚ್ಚರಿಕೆಯಿಂದ ಕಟ್ಟುತ್ತಿದ್ದರು. ಇಲ್ಲಿಯೇ ಸ್ವಾಮೀಜಿ ಹುಟ್ಟಿರಬಹುದು ಎಂಬುದಕ್ಕೆ ವಿವರಣೆ ನೀಡುತ್ತ ಸ್ವಾಮಿಗಳು ಹೇಳಿದರು: "ಹಿಂದಿನ ಕಾಲದಲ್ಲಿ ಹೆರಿಗೆಗಾಗಿಯೇ ಪ್ರತ್ಯೇಕ ಸ್ಥಳವನ್ನು ಮೀಸಲಾಗಿ ರಿಸುತ್ತಿದ್ದರು. ಬಂಗಾಳಿಯಲ್ಲಿ ಅದನ್ನು 'ಅಂದರ್ ಮಹಲ್' ಎಂದು ಕರೆಯುತ್ತಾರೆ. ಮನೆಯ ಮಹಿಳೆಯರು ಅದನ್ನು ಎಲ್ಲ ಉದ್ದೇಶಗಳಿಗಾಗಿಯೂ ಉಪಯೋಗಿಸುತ್ತಿದ್ದರು. ಅದಕ್ಕೆ ನಿರ್ದಿಷ್ಟವಾದ ಮೇಲ್ಛಾವಣಿ ಇರುತ್ತಿರಲಿಲ್ಲ. ಮಹಿಳೆಯರು ಅದನ್ನು ಕೂದಲು ಒಣಗಿಸಿಕೊಳ್ಳುವುದು, ಬಟ್ಟೆ ಹರಡುವುದು ಮುಂತಾದವುಗಳಿಗೆ ಉಪಯೋಗಿಸು ತ್ತಿದ್ದರು. ಮಳೆಗಾಲದಲ್ಲಿ ತಾತ್ಕಾಲಿಕವಾದ ಒಂದು ಹುಲ್ಲಿನ ಛಾವಣಿಯನ್ನು ಹಾಕುತ್ತಿದ್ದರು. ಇದು ಇರುವ ಸ್ಥಿತಿಯನ್ನು ನೋಡಿದರೆ ಇದೇ ಸ್ವಾಮೀಜಿ ಹುಟ್ಟಿದ ಸ್ಥಳವೆನ್ನುವುದರಲ್ಲಿ ಸಂದೇಹವಿಲ್ಲ."ನಾವು ಭಕ್ತಿಭಾವದಿಂದ ಕೈ ಮುಗಿದು ಅಲ್ಲಿಯ ಪಾವಿತ್ರ್ಯದ ಸಂವೇದನೆಯನ್ನು ಅನುಭವಿಸಿದೆವು.

ಮುಂದೆ ಆಗ ತಾನೆ ದುರಸ್ತಿಯಾದ ಕೊಠಡಿಗೆ ಹೋದೆವು. ಅಲ್ಲಿಯೇ ಬಾಲಕ ನರೇಂದ್ರನನ್ನು ಕೂಡಿಹಾಕುತ್ತಿದ್ದುದು—ಅವನು ಭಿಕ್ಷುಕರಿಗೆ ಕೈಗೆ ಸಿಕ್ಕಿದುದನ್ನೆಲ್ಲ ಕೊಡುವುದನ್ನು ತಪ್ಪಿಸಲು. ಬಾಲಕ ನರೇಂದ್ರನು "ತ್ಯಾಗಾಭ್ಯಾಸ" ಮಾಡುತ್ತಿದ್ದ ಕಿಟಕಿಯನ್ನು ನಾವು ನೋಡಿದೆವು. (ಆ ಕಿಟಕಿಯ ಮೂಲಕ ನರೇಂದ್ರ ಬಟ್ಟೆಯನ್ನು ಭಿಕ್ಷುಕರಿಗೆ ಎಸೆಯುತ್ತಿದ್ದನಂತೆ.) ಭುವನೇಶ್ವರಿ ದೇವಿ ಮತ್ತು ಸ್ವಾಮೀಜಿಯ ಸಹೋದರರು ವಾಸಿಸುತ್ತಿದ್ದ ಕೊಠಡಿಗಳನ್ನೂ ನಾವು ನೋಡಿದೆವು. ಪ್ರತಿಯೊಂದೂ ದುರಸ್ತಿಯ, ಪುನರ್ನಿರ್ಮಾಣದ ಸ್ಥಿತಿಯಲ್ಲಿತ್ತು. ಆದರೆ ಗತಕಾಲದ ಶ್ರೇಷ್ಠ ಘಟನೆಗಳ ಪುಣ್ಯಸ್ಮೃತಿಯನ್ನು ಮನಸ್ಸಿನಲ್ಲಿ ಮೂಡಿಸುತ್ತಿದ್ದವು.

ಪುನರ್ನಿರ್ಮಾಣದ ಕಾರ್ಯದ ಬಗ್ಗೆ ನಾವು ಹೆಚ್ಚು ತಿಳಿದುಕೊಳ್ಳಲು ಬಯಸಿದೆವು. ಸ್ವಾಮಿಗಳು ವಿವರಿಸತೊಡಗಿದರು : "ಇದೊಂದು ಹಳೆಯ ಮನೆ. ಆದರೆ ನಿರ್ಮಾಣ ಕಾರ್ಯ ಅತ್ಯುತ್ತಮ ಮಟ್ಟದ್ದು. ಯಾವ ದುರಸ್ತಿಯೂ ಇಲ್ಲದೆ, ಯಾರೂ ಸರಿಯಾಗಿ ನೋಡಿಕೊಳ್ಳದೆ ಇಷ್ಟುಕಾಲ ಉಳಿದಿದೆ. ಪುನರ್ನಿರ್ಮಾಣ ಕಾರ್ಯದಲ್ಲಿ ನಾವು ಪ್ರತಿಯೊಂದು ಇಟ್ಟಿಗೆಯನ್ನೂ ಎಚ್ಚರಿಕೆಯಿಂದ ಪರೀಕ್ಷಿಸುತ್ತೇವೆ. ಯಾವುದಾದರೂ ಇಟ್ಟಿಗೆ ದುರ್ಬಲವಾಗಿದ್ದರೆ ಅಥವಾ ಮುರಿದುಹೋಗಿದ್ದರೆ ಅದೇ ರೀತಿಯ ಹೊಸ ಇಟ್ಟಿಗೆಯನ್ನು ಉಪಯೋಗಿಸುತ್ತೇವೆ. ಕೆಲವು ಸ್ಥಳಗಳಲ್ಲಿ ನಾವು ಇಡೀ ಗೋಡೆಯನ್ನೇ ಹೊಸದಾಗಿ ಕಟ್ಟಬೇಕಾಗುತ್ತದೆ. ಒಂದು ಗೋಡೆ ಎಲ್ಲ

ರೀತಿಯಿಂದಲೂ ಸರಿಯಾಗಿದ್ದರೆ, ಅದನ್ನು ಹೆಚ್ಚು ಗಟ್ಟಿಗೊಳಿಸಲು ಅದಕ್ಕೆ ಸಿಮೆಂಟ್ ಕಾಂಕ್ರೀಟನ್ನು ಸೇರಿಸುತ್ತೇವೆ. ಹೊಸ ಇಟ್ಟಿಗೆಗಳನ್ನು ಸೇರಿಸಲು ಹಳೆಯವನ್ನು ತೆಗೆದಾಗ ನಿರ್ದಿಷ್ಟ ಸ್ಥಳ ವನ್ನು ಗುರುತಿಸಲು ಅವುಗಳಿಗೆ ಬೇರೆ ಬೇರೆ ಸಂಖ್ಯೆಯನ್ನು ಕೊಡುತ್ತೇವೆ. ಕಟ್ಟಡಕ್ಕೆ ಹೆಚ್ಚು ಶಕ್ತಿಯನ್ನು ನೀಡಲು ಇದಕ್ಕಾಗಿಯೇ ವಿಶೇಷ ರೀತಿಯಲ್ಲಿ ತಯಾರಿಸಿದ ಇಟ್ಟಿಗೆಗಳನ್ನು ಉಪಯೋಗಿಸುತ್ತೇವೆ. ಹೊಸ ಇಟ್ಟಿಗೆಗಳನ್ನು ಹಳೆಯದರಿಂದ ಪ್ರತ್ಯೇಕಿಸಲು ಹೊಸವಕ್ಕೆ RKM+ ತಯಾರಿಸಿದ ವರ್ಷ—ಈ ಮುದ್ರೆಯನ್ನು ಒತ್ತುತ್ತೇವೆ. ಈ ರೀತಿ ಮಾಡುವುದರಿಂದ ಮುಂದೆ ಅವಶ್ಯ ಸಂದರ್ಭಗಳಲ್ಲಿ ದುರಸ್ತಿಯಾಗಬೇಕಾದಾಗ ಹಳೆಯ ಇಟ್ಟಿಗೆಗಳಿಂದ ಹೊಸವನ್ನು ಪ್ರತ್ಯೇಕಿಸಲು ತುಂಬ ಅನುಕೂಲವಾಗುತ್ತದೆ. ಇದೊಂದು ಬಹಳ ವಿಸ್ತಾರವಾದ ಯೋಜನೆ, ಬಹಳ ಕಾಲ ಹಿಡಿಯುವಂತಹುದು ಮತ್ತು ಹೊಸ ಕಟ್ಟಡ ಕಟ್ಟುವುದಕ್ಕಿಂತ ಹೆಚ್ಚು ಜಟಿಲ ಮತ್ತು ಹೆಚ್ಚು ಖರ್ಚು. ಸಾಧ್ಯವಾದಷ್ಟೂ ಮರದ ಹಳೆಯ ಚೌಕಟ್ಟುಗಳನ್ನೂ ತೊಲೆಗಳನ್ನೂ ಉಳಿಸಿಕೊಂಡಿದ್ದೇವೆ. ಬದಲಾವಣೆ ಅವಶ್ಯಕವಾದಾಗ ಮೂಲದಲ್ಲಿ ಉಪಯೋಗಿಸಿದ ಬರ್ಮಾಸಾಗವಾನೆಯನ್ನೇ ಉಪಯೋಗಿಸಿದ್ದೇವೆ. ಒಟ್ಟು ಯೋಜನೆಯ ಖರ್ಚಿನ ಅಂದಾಜು ೮ ಕೋಟಿ ರೂಪಾಯಿ ಮತ್ತು ಈಗಾಗಲೇ ೬ ಕೋಟಿ ಖರ್ಚಾಗಿದೆ."

ಅನಂತರ ಅವರು ಇಡೀ ಯೋಜನೆಯ ನಕ್ಷೆಯನ್ನೂ ಅದರ ಮರದ ಸುಂದರ ಪ್ರತಿರೂಪವನ್ನೂ (ಈ ಸಂಚಿಕೆಯ ರಕ್ಷಾಪುಟದಲ್ಲಿರುವಂತೆ) ತೋರಿಸಿದರು. ಸ್ವಾಮೀಜಿಯ ಮನೆಯನ್ನು ಒಂದು ಸ್ಮಾರಕವಾಗಿ ಮಾಡಲಾಗುವುದು. ಸ್ವಾಮಿ ವಿವೇಕಾನಂದರು, ಅವರ ತಾಯಿ ಮತ್ತು ಅವರ ಖ್ಯಾತ ಸಹೋದರರ ಸ್ಮೃತಿಗೆ ಸಂಬಂಧಿಸಿದ ಎಲ್ಲ ವಸ್ತುಗಳ ಸಂಗ್ರಹಾಲಯವೊಂದು ಅಲ್ಲಿರುತ್ತದೆ. ಸ್ವಾಮೀಜಿಯ ಮನೆಯ ಸುತ್ತಲಿನ ಜಾಗವನ್ನೂ ಕೊಂಡುಕೊಳ್ಳಲಾಗಿದೆ. ಅಲ್ಲಿ ವಾಸಿಸುತ್ತಿದ್ದವರಿಗೆ ಪರಿಹಾರಧನವನ್ನು ನೀಡಿ ಬೇರೆ ಕಡೆ ಕಳಿಸಲಾಗಿದೆ. ಇದರ ಹಿಂದೆ ಅಪಾರ ಪರಿಶ್ರಮವಿದೆ ಮತ್ತು ಹಣದ ಖರ್ಚಿದೆ. ಉದಾರ ರೀತಿಯಲ್ಲಿ ಧನಸಹಾಯ ಮಾಡಿದವರೆಲ್ಲರಿಗೂ ಕೃತಜ್ಞತೆ ಸಲ್ಲಬೇಕು.

ಸ್ವಾಮೀಜಿ ಸ್ಮಾರಕ ಭವನದ ಪ್ರವೇಶದ್ವಾರವು ಮುಖ್ಯ ರಸ್ತೆಯಾದ ವಿಧಾನ್ ಸರಣಿಯಲ್ಲಿರುತ್ತದೆ. ಗೌರಮೋಹನ ಮುಖರ್ಜಿ ಬೀದಿಯು ಈ ರಸ್ತೆಗೆ ಬಂದು ಸೇರುತ್ತದೆ. ಮುಖಮಂಟಪದಲ್ಲಿ ಒಂದು ಆಫೀಸು ಇರುತ್ತದೆ. ಅಲ್ಲಿ ಸಂದರ್ಶಿತರನ್ನು ಬರ ಮಾಡಿಕೊಂಡು ಅವರಿಗೆ ಮಾರ್ಗದರ್ಶನ ನೀಡುವ ವ್ಯವಸ್ಥೆ ಇರುತ್ತದೆ. ಅದೇ ದ್ವಾರಮಂಟಪದಲ್ಲಿಯೇ ಸ್ವಾಮೀಜಿ ಹುಟ್ಟಿದ ಸಮಯದಲ್ಲಿ ಕಲ್ಕತ್ತ ಹೇಗಿತ್ತೆಂಬುದನ್ನು ಚಿತ್ರಿಸುವ ಒಂದು ಚಿತ್ರಶಾಲೆ ಇರುತ್ತದೆ. ಸ್ವಾಮೀಜಿಯ ಮನೆಯ (ಅದಕ್ಕೆ **ಹೆರಿಟೇಜ್ ಬಿಲ್ಡಿಂಗ್** ಎಂದು ಹೆಸರಿಸಲಾಗಿದೆ) ಸುತ್ತ ಇನ್ನೂ ಮೂರು ಕಟ್ಟಡಗಳಿರುತ್ತವೆ. ಮೊದಲನೆಯದಾಗಿ ವಿವೇಕಾನಂದ ಸಂಶೋಧನಾ ಸಂಸ್ಥೆ. ಇದರ ಉದ್ದೇಶ ವಿಶೇಷವಾಗಿ ವಿದ್ವಾಂಸರು ಮತ್ತು ಸಂಶೋಧಕರಿಗೆ ಅನುಕೂಲ ಒದಗಿಸುವುದು. ಈ ಸಂಸ್ಥೆಯ ಕಟ್ಟಡ ನಿರ್ಮಾಣ ಆಗಲೇ ಪ್ರಾರಂಭವಾಗಿದೆ. ಈ ಸಂಸ್ಥೆಯಲ್ಲಿ ಸಂಶೋಧಕರಿಗಾಗಿ ಅಧ್ಯಯನ ಕೋಣೆಗಳಿರುತ್ತವೆ ಮತ್ತು ಒಂದು ಪುಸ್ತಕಾಲಯವಿರುತ್ತದೆ. ಇನ್ನೊಂದು ಕಟ್ಟಡ ಬಡ ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕ ಭಂಡಾರ. ಅಲ್ಲಿಯೇ ಸ್ಥಳೀಯ ಜನರ ಅನುಕೂಲಕ್ಕಾಗಿ ಒಂದು ಸಭಾಭವನವಿರುತ್ತದೆ. ಮೂರನೆಯದು ಗೌರಮೋಹನ ಮುಖರ್ಜಿ ಬೀದಿಯ ಆ ಕಡೆ ಮೂರು ಮಹಡಿಯ ಒಂದು ಕಟ್ಟಡ. ಇದು ಸಾಮಾಜಿಕ ಸೇವಾಕಾರ್ಯಕ್ಕಾಗಿ ಮೀಸಲು. ಇದರ ಅತ್ಯಂತ ಮೇಲಿನ ಮಹಡಿಯಲ್ಲಿ ರಾಮಕೃಷ್ಣ ಮಠ ಇರುತ್ತದೆ ಮತ್ತು ನೆಲಮಾಳಿಗೆ ವಾಹನ ನಿಲ್ಲಿಸುವ ಜಾಗ. ಪ್ರಸಿದ್ಧ ನಿರ್ಮಾಣ ಸಂಸ್ಥೆಯಾದ ಲಾರ್ಸನ್ ಅಂಡ್ ಟ್ಯೂಬ್ರೋ ಆಗಲೇ ಕೆಲಸ ಪ್ರಾರಂಭಿಸಿದೆ.

ಇದನ್ನೆಲ್ಲ ಕೇಳುತ್ತಿರುವಾಗ ಮತ್ತು ನೋಡುತ್ತಿರುವಾಗ ಇಷ್ಟು ಕಾಲವೂ ಈ ಕೆಲಸವನ್ನು ಏಕೆ ಕೈಗೆತ್ತಿಕೊಳ್ಳಲಿಲ್ಲ ಎಂದು ಆಶ್ಚರ್ಯವಾಯಿತು. ಸ್ವಾಮಿಗಳನ್ನು ವಿಚಾರಿಸಿದಾಗ ಅವರು ಹೇಳಿದರು : "ಸ್ವಾಮೀಜಿಯ ಜನ್ಮಶತಮಾನೋತ್ಸವದ ವರ್ಷ ೧೯೬೩ರಿಂದಲೇ ಈ ಮನೆಯನ್ನು ವಶಪಡಿಸಿಕೊಳ್ಳುವ ಪ್ರಯತ್ನ ನಡೆದಿದೆ. ಆದರೆ ಸಫಲವಾಗಲಿಲ್ಲ. ಪಶ್ಚಿಮ ಬಂಗಾಳ ಸರ್ಕಾರವೂ ಕೂಡ ಈ ಆಸ್ತಿಯನ್ನು ವಶಪಡಿಸಿಕೊಂಡು ರಾಮಕೃಷ್ಣ ಮಿಷನ್ನಿಗೆ ನೀಡಲು ಮುಂದೆ ಬಂದಿತ್ತು. ಆದರೆ ಈ ನಡುವೆ ಅನೇಕ ನ್ಯಾಯಾಂಗ ಅಡಚಣೆಗಳು ತಲೆದೋರಿದವು. ಕೇವಲ ೧೦ ವರ್ಷಗಳಿಂದೀಚೆಗಷ್ಟೇ ಈ ಕೆಲಸ ಕ್ರಮಬದ್ಧವಾಗಿ ಪ್ರಾರಂಭವಾಯಿತು. ಇಲ್ಲಿ ಅನೇಕರು ವಾಸಿಸುತ್ತಿದ್ದರು—ಕೆಲವರು ನ್ಯಾಯಸಮ್ಮತವಾಗಿ, ಮತ್ತೆ ಅನೇಕರು ಈ ಸ್ಥಳವನ್ನು ಅತಿಕ್ರಮಿಸಿ ಇಲ್ಲಿ ತಳವೂರಿದ್ದರು. ಇಲ್ಲಿ ೫೪ ಕುಟುಂಬದವರು ವಾಸಿಸುತ್ತಿದ್ದರು ಮತ್ತು ೨೨ ವ್ಯಾಪಾರ ಮಳಿಗೆಗಳಿದ್ದವು. ಅವುಗಳಲ್ಲಿ ಕೆಲವು ಕಿರುಕೈಗಾರಿಕೆಗಳೂ ಇದ್ದವು—ಸಣ್ಣ ಮುದ್ರಣಾಲಯ, ಬ್ಲೇಡು ತಯಾರಿಕೆ ಇತ್ಯಾದಿ. ಇವರೆಲ್ಲರಿಗೂ ಈ ಸ್ಥಳದ ಪ್ರಾಮುಖ್ಯವನ್ನು ತಿಳಿಯಪಡಿಸುವುದು ಅತ್ಯಂತ ಪ್ರಯಾಸದ ಕೆಲಸವಾಗಿತ್ತು. ಇಷ್ಟೇ ಅಲ್ಲದೆ ಮನೆಯ ಮೇಲ್ಛಾವಣಿಯನ್ನು ಅನೇಕರು ತಮ್ಮ ರಾತ್ರಿಯ ವಾಸಸ್ಥಾನವಾಗಿ ಉಪಯೋಗಿಸುತ್ತಿದ್ದರು. ಈ ಜಾಗವನ್ನು ಪಡೆಯಲು ನಾವು ಬಹಳ ಶ್ರಮಿಸಬೇಕಾಯಿತು. ಅನೇಕ ನ್ಯಾಯಾಂಗ ಹೋರಾಟ ನಡೆಸಬೇಕಾಯಿತು. ಇಲ್ಲಿಂದ ಸ್ಥಳಾಂತರಗೊಂಡವರಿಗೆ ಪರಿಹಾರವಾಗಿ (*Compensation*) ಅಪಾರ ಹಣ ನೀಡಬೇಕಾಯಿತು. ಅವರಲ್ಲಿ ಕೆಲವರಿಗಾಗಿ ಬೇರೆ ಮನೆಗಳನ್ನೂ ಕಟ್ಟಿಕೊಡಲಾಗಿದೆ. ಜನರಲ್ಲಿ ನಮ್ಮ ಯೋಜನೆಗೆ ಸಂಬಂಧಿಸಿದಂತೆ ಅನೇಕ ರೀತಿಯ ಭಯ ಆತಂಕಗಳಿದ್ದವು. ಆದರೆ ಈಗ ಸ್ವಾಮೀಜಿಯ ಅನುಗ್ರಹದಿಂದ ಎಲ್ಲ ಸರಿಪಡಿಸಲಾಗಿದೆ. ಯಾರಿಗೂ ತೊಂದರೆಯಾಗುವುದು ನಮಗೆ ಇಷ್ಟವಿರಲಿಲ್ಲ. ಆದ್ದರಿಂದ ಬಹಳ ಕ್ರಮಬದ್ಧವಾಗಿ ಕೆಲಸ ನಿರ್ವಹಿಸಿದೆವು. ಇದು ಸ್ವಾಮೀಜಿಯ ಮನೆ, ಆದ್ದರಿಂದ ಅವರ ಉದಾತ್ತ ಜೀವನಕ್ಕೆ ಅನುಸಾರವಾಗಿಯೇ ನಾವು ಕೆಲಸ ಮಾಡಬೇಕಾದುದು ಅತ್ಯಗತ್ಯ."

ಈ ಎಲ್ಲ ಸ್ವಾರಸ್ಯಕರ ವಿಷಯಗಳನ್ನು ಕೇಳಿ ಮತ್ತು ಎಲ್ಲವನ್ನೂ ನೋಡಿಯಾದಮೇಲೆ ನಾವು ವರಾಂಡಕ್ಕೆ ಹಿಂದಿರುಗಿದೆವು. ಅಲ್ಲಿ ಕುಳಿತು ಮಣ್ಣುಬಟ್ಟಲಿನಲ್ಲಿ ಟೀಯನ್ನು ಹೀರುತ್ತ, ಈ ಅಪಾರ ಪರಿಶ್ರಮದ ಮಹತ್ ಸಾಧನೆಯನ್ನು ಪರಿಭಾವಿಸುತ್ತ ನಾವು

ಚಕಿತರಾದೆವು. ಇತಿಹಾಸದ ಗರ್ಭದಲ್ಲಿ ಹುದುಗಿಹೋಗಿದ್ದ ಈ ಭವ್ಯ ಭವನ ನಿಧಾನವಾಗಿ ಮತ್ತೆ ಮೈದೋರುತ್ತಿರುವುದನ್ನು ಕಲ್ಪಿಸಿಕೊಂಡು ಪುಳಕಿತಗೊಂಡೆವು. ಇದೊಂದು ನಂಬಲಸಾಧ್ಯವಾದ ಕಥೆ. ನರೇಂದ್ರನ ಬಾಲ್ಯ ಲೀಲೆಗಳೆಲ್ಲ ಮತ್ತೊಮ್ಮೆ ಮನಃಪಟಲದಲ್ಲಿ ಹಾದುಹೋದವು. ಗತಕಾಲದ ದಿವ್ಯಸಾನ್ನಿಧ್ಯದಲ್ಲಿ ನಾವಿರುವಂತೆ ಭಾಸವಾಯಿತು. ನಿಜ, ಸ್ವಾಮಿ ವಿವೇಕಾನಂದರು ಈಗಲೂ ನಮ್ಮೊಂದಿಗಿರುವರು. ಅವರೇ ಹೀಗೆ ಹೇಳಲಿಲ್ಲವೇ : "ನನ್ನ ದೇಹದಿಂದ ಹೊರಗೆ ಹೋಗುವುದೇ, ಈ ದೇಹವನ್ನು ಜೀರ್ಣವಸನದಂತೆ ಬಿಸಾಕುವುದೇ ಒಳ್ಳೆಯದೆಂದು ನನಗನಿಸುತ್ತಿದೆ. ಆದರೆ ನಾನು ಕೆಲಸಕ್ಕೆ ತಿಲಾರ್ಪಣ ನೀಡುವುದಿಲ್ಲ. ತಾನು ದೇವರೊಂದಿಗೆ ಒಂದಾಗಿರುವುದನ್ನು ಜಗತ್ತು ಅರಿಯುವವರೆಗೂ ನಾನು ಎಲ್ಲೆಲ್ಲಿಯೂ ಜನರಿಗೆ ಸ್ಫೂರ್ತಿ ನೀಡುತ್ತಾ ಹೋಗುತ್ತೇನೆ."

ಸ್ವಾಮೀಜಿಯ ಜನ್ಮಸ್ಥಳವನ್ನು ಸುರಕ್ಷಿತವಾಗಿಡುವುದು ಬಹಳ ಹಿಂದೆಯೇ ಆಗಬೇಕಾದ ಕಾರ್ಯವಾಗಿತ್ತು. ಇನ್ನು ಒಂದೆರಡು ವರ್ಷಗಳಲ್ಲಿ ಈ ಕಾರ್ಯ ಸಮಾಪ್ತಿಗೊಳ್ಳುವುದು. ಆಗ ಅನೇಕಾನೇಕ ಜನರು ಇಲ್ಲಿಂದ ಸ್ಫೂರ್ತಿಯನ್ನು ಪಡೆಯುತ್ತಾರೆ. ಇದೊಂದು ಪಾವನ ಯಾತ್ರಾಸ್ಥಳವಾಗಿ ಜನರು ಆಧ್ಯಾತ್ಮಿಕ ಪುನರುಜ್ಜೀವನವನ್ನು ಪಡೆಯಲು, ಜನಸೇವೆಯ ಮಹಾಪ್ರೇರಣೆಯನ್ನು ಪಡೆಯಲು, ಆ ದಿವ್ಯಜೀವನದ ಪುಣ್ಯ ಸರೋವರದಲ್ಲಿ ಮಿಂದು ಪುನೀತರಾಗಲು ಇಲ್ಲಿಗೆ ತಂಡೋಪತಂಡವಾಗಿ ಬರುತ್ತಾರೆ. ಈ ಪುನರ್ನಿರ್ಮಾಣವು ಕಾಲಗರ್ಭದಲ್ಲಿ ಮುಚ್ಚಿಹೋಗಿದ್ದ ಒಂದು ಸ್ಫೂರ್ತಿಯ ಝರಿಯನ್ನು ಜಗತ್ತಿನ ಮುಂದೆ ತೆರೆದಿಡುತ್ತಿದೆ. ಇಡೀ ಜಗತ್ತು ಈ ಮಹತ್ಕಾರ್ಯವನ್ನು ಕೊಂಡಾಡುವುದರಲ್ಲಿ ಸಂದೇಹವಿಲ್ಲ. ☆

# ಪ್ರಹಸನ ಪ್ರಸಂಗ

ಒಂದು ಮೃಗಾಲಯ. ಅಲ್ಲಿ ಕೆಲವು ಕಾಂಗ್ರೂಗಳಿದ್ದವು. ಅವುಗಳ ಸುತ್ತ ಗೋಡೆ ಇತ್ತು. ಒಂದು ತುಂಟ ಕಾಂಗ್ರೂಮರಿ ಗೋಡೆಯ ಹೊರಗೆ ಬರುತ್ತಿತ್ತು. ಅದನ್ನು ತಡೆಯಲು ಗೋಡೆಯನ್ನು ೫ ಅಡಿ ಏರಿಸಲಾಯಿತು. ಆದರೂ ಆ ಮರಿ ಹೊರಗೆ ಬಂದು ಆಟ ಆಡುವುದು ನಿಲ್ಲಲಿಲ್ಲ. ಅಧಿಕಾರಿಗಳು ಗೋಡೆಯನ್ನು ಇನ್ನೂ ಏರಿಸಿದರು. ಕಾಂಗ್ರೂಮರಿ ಹೊರಗೆ ಬರುವುದು ನಿಲ್ಲಲಿಲ್ಲ. ಗೋಡೆಯ ಎತ್ತರ ಏರುತ್ತ ಹೋಗಿ ೫೦ ಅಡಿ ಮುಟ್ಟಿತು. ಆದರೆ ಕಾಂಗ್ರೂ ಮರಿ ಹೊರಗೆ ಬರುವುದಂತೂ ನಿಲ್ಲಲಿಲ್ಲ. ಈಗ ಒಳಗಡೆ ಇರುವ ಕಾಂಗ್ರೂಗಳು ಆಶ್ಚರ್ಯದಿಂದ ಗೋಡೆ ಏರುತ್ತಿರುವುದನ್ನು ನೋಡುತ್ತಿವೆ.

ಒಂದು ಕಾಂಗ್ರೂ : ಏನು, ಗೋಡೆ ಏರುತ್ತಲೇ ಇದೆಯಲ್ಲ?

ಇನ್ನೊಂದು ಕಾಂಗ್ರೂ : ಹೌದು, ಮೊದಲು ೫ ಅಡಿ ಇತ್ತು, ಈಗ ೫೦ ಅಡಿ ಆಗಿದೆ.

ಮತ್ತೊಂದು ಕಾಂಗ್ರೂ : ಏರಲಿ ಬಿಡು. ೧೦೦ ಅಡಿ ಏರಿದರೂ ಏನಂತೆ. ಅವರು ಬಾಗಿಲು ಹಾಕುವುದನ್ನು ಮರೆಯುವವರೆಗೂ ಯಾವ ತೊಂದರೆಯೂ ಇಲ್ಲ.

ನಾವು ಆಧ್ಯಾತ್ಮಿಕ ಜೀವನದಲ್ಲಿ ಸಾಧನೆಯ ಭದ್ರ ಕೋಟೆಯನ್ನು ಕಟ್ಟುತ್ತೇವೆ. ಆದರೆ ಆಸೆಗಳ ಬಾಗಿಲನ್ನು ಮುಚ್ಚುವುದೇ ಇಲ್ಲ. ಆ ಬಾಗಿಲುಗಳ ಮೂಲಕ ನಮ್ಮ ಮಾನಸಿಕ ಶಕ್ತಿಯೆಲ್ಲ ಹೊರಗೆ ಹೋಗುತ್ತಿರುತ್ತದೆ. ಆಸೆಗಳ ಬಾಗಿಲು ಮುಚ್ಚದೆ ಸಾಧನೆಯ ಗೋಡೆಯನ್ನು ಎಷ್ಟು ಏರಿಸಿದರೂ ಪ್ರಯೋಜನವಿಲ್ಲ.

❊ ❊ ❊ ❊

ಭಗವನ್ನಾಮವನ್ನು ಉಚ್ಚರಿಸುವುದು ನಮಗೆ ಒಂದು ಯಾಂತ್ರಿಕ ಕ್ರಿಯೆಯಾಗಿರುತ್ತದೆ, ಭಕ್ತಿಯ ಸಾಧನೆಯಾಗಿರುವುದಿಲ್ಲ. ಆದ್ದರಿಂದ ಎಷ್ಟೇ ನಾಮೋಚ್ಚಾರಣೆ ಮಾಡಿದರೂ ಆಂತರಿಕ ಪರಿವರ್ತನೆಯಾಗುವುದಿಲ್ಲ. ಅದು ನಮ್ಮ ವಿಷಮ ಪರಿಸ್ಥಿತಿಯಲ್ಲಿ ನಮಗೆ ಸಹಾಯಕ್ಕೆ ಬರುವುದಿಲ್ಲ, ಏಕೆಂದರೆ ಅದು ಅಂತರಂಗವನ್ನು ಪ್ರವೇಶಿಸಿರುವುದೇ ಇಲ್ಲ.

ಒಬ್ಬ ವ್ಯಾಪಾರಿ ಇದ್ದನು. ಅವನಿಗೆ ಅನೇಕ ಮಕ್ಕಳು. ಎಲ್ಲ ಮಕ್ಕಳಿಗೂ ದೇವರ ಹೆಸರುಗಳನ್ನೇ ಇಟ್ಟಿದ್ದ. ಅವರ ಹೆಸರು ಹಿಡಿದು ಕರೆಯುವ ಮೂಲಕವಾದರೂ ಭಗವನ್ನಾಮವನ್ನು ಉಚ್ಚರಿಸಿದಂತಾಗುತ್ತದೆ ಎಂಬುದು ಅವನ ಅನಿಸಿಕೆಯಾಗಿತ್ತು. ಅವನಿಗೆ ವಯಸ್ಸಾಯಿತು. ಇನ್ನೇನು ಸಾವು ಸಮೀಪಿಸುವ ಸ್ಥಿತಿಯಲ್ಲಿದ್ದಾನೆ. ಮಕ್ಕಳೆಲ್ಲರನ್ನು ಈಗ ಕರೆದರೆ ದೇವರನ್ನು ಕರೆದಂತಾಗುತ್ತದೆ, ಹಾಗೆ ಕರೆಯುತ್ತಲೇ ಪ್ರಾಣ ಬಿಡಬೇಕು ಎಂದು ಅವನು ಆಲೋಚಿಸಿದ. "ಕೃಷ್ಣ, ಶಿವ, ರಾಮ, ಗೋವಿಂದ, ನಾರಾಯಣ" ಎಂದು ಕರೆಯತೊಡಗಿದ. ಮಕ್ಕಳೆಲ್ಲರೂ ಮುದುಕಪ್ಪನು ಯಾವುದಾದರೂ ರಹಸ್ಯ ನಿಧಿಯ ವಿಚಾರವನ್ನು ಹೇಳಬಹುದೆಂದು, ಓಡೋಡಿ ಬಂದರು. ಅವರನ್ನೆಲ್ಲ ನೋಡಿ ವ್ಯಾಪಾರಿಯು ಸಂಕಟದಿಂದ "ಅಯ್ಯೋ, ನೀವೆಲ್ಲರೂ ಬಂದುಬಿಟ್ಟರೆ ಅಂಗಡಿಯನ್ನು ನೋಡಿಕೊಳ್ಳುವವರಾರು?" ಎಂದು ಉದ್ಗರಿಸುತ್ತಿದ್ದಂತೆಯೇ ಅವನ ಪ್ರಾಣಪಕ್ಷಿ ಹಾರಿಹೋಯಿತು.

❊ ❊ ❊ ❊

ಎಷ್ಟೋ ವೇಳೆ ನಮ್ಮನ್ನು ನಾವು ಪ್ರಶಂಸಿಸಿಕೊಳ್ಳಲು ಹೋಗಿ ಇತರರ ಲೇವಡಿಗೆ ಒಳಗಾಗುತ್ತೇವೆ. ಅನೇಕರು ಅತ್ಯಂತ ಉತ್ಪ್ರೇಕ್ಷೆಯಿಂದ ತಮ್ಮನ್ನು ಹೊಗಳಿಕೊಳ್ಳುತ್ತಾರೆ. ಇದು ಅವರ ಆಂತರಿಕ ಖಾಲಿತನವನ್ನು ಸೂಚಿಸುತ್ತದೆ.

ಅಮೆರಿಕದಲ್ಲಿ ರಾಜಕಾರಣಿಯೊಬ್ಬನು ಟೆಕ್ಸಾಸ್ ಪ್ರಾಂತಕ್ಕೆ ಭೇಟಿ ನೀಡಲು ಹೋದನು. ಟೆಕ್ಸಾಸ್ ವಿಸ್ತಾರವಾದ ಭೂಪ್ರದೇಶಕ್ಕೆ ಪ್ರಸಿದ್ಧಿ. ಒಬ್ಬೊಬ್ಬರು ರೈತರೂ ಸಾವಿರಾರು ಎಕರೆ ಭೂಮಿಯನ್ನು ಹೊಂದಿರುತ್ತಾರೆ. ರಾಜಕಾರಣಿಯು ಒಬ್ಬ ರೈತನನ್ನು ಭೇಟಿಯಾದನು. ವ್ಯವಸಾಯದ ಬಗ್ಗೆ ಮಾತನಾಡುತ್ತಿರುವಾಗ ರಾಜಕಾರಣಿಯು ಮಧ್ಯೆ ಹೇಳಿದನು : "ನಾನೂ ವಿಸ್ತಾರವಾದ ಹೊಲವನ್ನು ಹೊಂದಿದ್ದೇನೆ." ರೈತ : ಎಷ್ಟು ವಿಸ್ತಾರವಾಗಿದೆ?

ರಾಜಕಾರಣಿ : ಬೆಳಗ್ಗೆ ಕಾರಿನಲ್ಲಿ ಒಂದು ತುದಿಯಿಂದ ಹೊರಟರೆ ಇನ್ನೊಂದು ತುದಿಯನ್ನು ಮುಟ್ಟುವ ಹೊತ್ತಿಗೆ ಸೂರ್ಯ ಮುಳುಗಿರುತ್ತಾನೆ. ರೈತ : ಓಹ್, ಹಿಂದೆ ನನ್ನ ಹತ್ತಿರವೂ ಅಂಥದೇ ಒಂದು ಕಾರು ಇತ್ತು! ✲